**ಸಿ.ಡಬ್ಲೂ–3 / ಪಿ.ಡಬ್ಲೂ–3**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 820/2015**

| | | |
|---|---|---|
| ಸಾಕ್ಷಿದಾರರ ಹೆಸರು | : | ಸ್ವಾಮಿ |
| ತಂದೆಯ ಹೆಸರು | : | ವರದನಾಯ್ಕ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಾಡ್ಯ ಗ್ರಾಮ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನಮ್ಮ ಪಕ್ಕದ ಜಮೀನಿನ ಮಾಲೀಕರು. ಸುಮಾರು 10 ವರ್ಷಗಳ ಹಿಂದೆ ನಮ್ಮ ಜಮೀನಿಗೆ ಹೋಗಲು ದಾರಿ ಬಿಡುವಂತೆ ಆರೋಪಿಗಳನ್ನು ಕೇಳಿದಾಗ ಆರೋಪಿಗಳು ಇಲ್ಲಿ ಯಾವುದೇ ದಾರಿ ಇಲ್ಲವೆಂದು ಹೇಳಿದಾಗ ನಾವು ಚಾಸಾ–1 ರವರ ಕಛೇರಿಗೆ ಹೋಗಿ ದಾರಿ ವ್ಯವಸ್ಥೆ ಮಾಡಿಕೊಡುವಂತೆ ಕೇಳಿದಾಗ ಚಾಸಾ–1 ರವರು ನಾಲೆಯ ಏರಿಯನ್ನು ಪರೀಕ್ಷಿಸಿ ಕಂದಾಯ ಇಲಾಖೆಯವರೊಂದಿಗೆ ಸ್ಥಳಕ್ಕೆ ಬಂದು ಗಡಿ ಗುರುತಿಸಿ, ಚರಂಡಿ ನಿರ್ಮಿಸಿರುತ್ತಾರೆ. ನಂತರ ಏನಾಯಿತು ಗೊತ್ತಾಗಿರುವುದಿಲ್ಲ. ಕಂದಾಯ ಅಧಿಕಾರಿಗಳು ನೆಟ್ಟಿದ್ದ ಕಲ್ಲನ್ನು ಯಾರು ಕಿತ್ತುಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

**ಸಿ.ಡಬ್ಲ್ಯೂ-3 / ಪಿ.ಡಬ್ಲ್ಯೂ-3**

ನೀರಾವರಿ ಇಲಾಖೆ ಮತ್ತು ಕಂದಾಯ ಇಲಾಖೆಯವರು ದಿನಾಂಕ 30.05.2013 ರಂದು ಒತ್ತುವರಿ ಜಮೀನನ್ನು ಅಳತೆ ಮಾಡಿಸಿ, ಒತ್ತುವರಿ ತೆರವುಗೊಳಿಸಿ, ಗಡಿರೇಖೆ ಗುರುತಿಸಿ, ಹದ್ದುಬಸ್ತ್ ಕಲ್ಲು ಹಾಕಿ ಗಡಿರೇಖೆ ದಾಟದಂತೆ ಚರಂಡಿ ನಿರ್ಮಿಸಿದ್ದು, ದಿನಾಂಕ 30.01.2015 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2 ರವರು ನಾಲೆಯ ಬಳಿ ಬಂದಾಗ ನಾವು ಕೂಡ ಆ ಸಂದರ್ಭದಲ್ಲಿ ಹಾಜರಿದ್ದು, ಆ ಸಂದರ್ಭದಲ್ಲಿ ಆರೋಪಿಗಳು ಹದ್ದುಬಸ್ತ್ ಕಲ್ಲನ್ನು ಕಿತ್ತುಹಾಕಿ ಚರಂಡಿಯನ್ನು ಮುಚ್ಚಿ ಟೊಮೇಟೋ ಬೆಳೆದು ಇಲಾಖೆಯ ವಾಹನಗಳಿಗೆ ಮತ್ತು ಅಕ್ಕ-ಪಕ್ಕದ ಜಮೀನಿನವರಿಗೆ ತಿರುಗಾಡಲು ತೊಂದರೆಯಾಗಿರುವುದು ಕಂಡುಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಹೇಳಿಕೆಯ ಭಾಗವನ್ನು **ನಿ.ಪಿ-7** ಎಂದು ಗುರುತಿಸಲಾಯಿತು. ಆರೋಪಿಗಳು ಉದ್ದೇಶಪೂರ್ವಕವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಸಾರ್ವಜನಿಕರಿಗೆ ತಿರುಗಾಡಲು ಇದ್ದ ದಾರಿಗೆ ಅನಾನುಕೂಲ ಮಾಡಿರುವ ವಿಚಾರ ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಸ್.ಎಸ್.ಜೆ, ವಕೀಲರಿಂದಃ** ಏನು ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**